ಮೈಸೂರ ಗೆಜಿಟ್.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ ಏಪ್ರಿಲ್ ತಾ|| 26, ಸ್ಯ 1890.

ಈ ಭಾಗವನ್ನು ಪ್ರತ್ಯೇಕ ಕೆರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ನೋಟೀಸ್.

ಮೈಸೂರು ಶೀಮೆಯ ಚೀಫ್ ಕೋರ್ಟ್‌ನಲ್ಲಿ.

ಸ್ಯ 1890ನೇ ಇಸವಿ ಮಿಸಲೇನಿಯಸ್ ಪಿಟೀಷ್ನ ನಂಬರು 74.

ಅರ್ಜಿದಾರ್ರು, ಭಗವಂತಯ್ಯ ವಗೈರೇರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಂತಾಮಣಿ ಶ್ರೀ ಲಕ್ಷ್ಮೀ ಸಹಾಯ ಕಂಪೆನಿ ಲಿಮಿಟೆಡ್ ಸೆಕ್ರಟೆರಿ ಭಗವಂತಯ್ಯ ವಗೈರೇರು ಈ ಕಂಪೆನಿಯ ಷೇರ್‌ದಾರ್ರ ಪೈಕಿ ಅನೇಕರು ಕಾಲಸ್ ಸರಿಯಾಗಿ ಕೊಡದೆ ಇರುವದ್ದರಿಂದ ಅಪೇಕ್ಷಿಸಿದವರಿಗೆ ಸಹಾಯದ ಮೊಬಲಗು ಕೊಡುವದಕ್ಕೆ ಇಲ್ಲದೆ ಕೆಲವರು ಕೋಲಾರ ಮುನಸಿಫ್ ಕೋರ್ಟ್‌ನಲ್ಲಿ ದಾವೆ ಮಾಡಿ ಡಿಕ್ರಿಗಳು ಪಡದು ನೊಬಲಗು ಜಪ್ತಿ ಮಾಡಿಸಿ ಇರುವ ಕಾರಣ ಕಂಪೆನಿ ವ್ಯೆಡಪ್ ಮಾಡಿಸಿ ಇರತಕ್ಕ ಮೊಬಲಗು ದಾನಾಷ್ಯಾಮಿ ಪ್ರಕಾರ ಯಾಲ್ಲರಿಗೂ ಹಂಚಬೇಕೆಂದು ವಗೈರೆ ಅರ್ಜಿ ಕೊಟ್ಟು ಇರುತ್ತಾರೆ. ಇದರ ವ್ಯವಸ್ಥೆ ಬಗ್ಗೆ ಸ್ಯ 1890ನೇ ಇಸವಿ ಮೇ ತಿಂಗಳು 27ನೇ ಮಂಗಳವಾರ ಹಿಯರಿಂಗ್ ಮೊಕರರ್ರ್ಯಾಡಿ ಇದೆ. ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರೇ ಆಗಲಿ ಅವರ ತರಫ್ ಮೊಖ್ತಾರೀ ಪಡದ ಅಡ್ವೊಕೇಟರಾಗಲಿ ಹಾಜರಾಗತಕ್ಕದ್ದು.

ತಾರೀಖು 2ನೇ ಮಾಹೆ ಏಪ್ರೆಲ್ 1890.

ಸ್ಯ 1890ನೇ ಇಸವಿ ಮಿಸಲೇನಿಯಸ್ ಪಿಟಿಷ್ನ ನಂಬರ್ 88.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.

ಬೆಡ್ಲಹಳ್ಳಿ ತಾಲ್ಲೂಕು ಗಂಜಿಗುಂಟೆ ಶ್ರೀ ನೃಸಿಂಹ್ಮಾನುಗ್ರಹ ಧನಸಹಾಯ ಕಂಪೆನಿ ಲಿಮಿಟೆಡ್ ಪ್ರೆಸಿಡೆಂಟ್ ಡೈರೆಕ್ಟರು ವಗೈರೇರು ಈ ಕಂಪೆನಿಯ ಮೆಂಬರುಗಳು ಕಾಲಸ್ ಕೊಡುವದಿಲ್ಲವೆಂದು ಸಂಪೂರ್ಣವಾಗಿ ಇರ್ಕಾರ್ಯಾಡಿ ಜನರಲ್ ಮೀಟಿಂಗಿನಲ್ಲಿ ಹಾಜರಿದ್ದ ಮೆಂಬರುಗಳು ಕಂಪೆನಿ ವ್ಯೆಡಪ್ ಮಾಡತಕ್ಕ ಬಗ್ಗೆ ಅಭಿಪ್ರಾಯಸುಪಟ್ಟು ಯಿರುವದ್ದರಿಂದ ಈ ಕಂಪೆನಿ ವ್ಯೆಡಪ್ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟು ಯಿರುತ್ತಾರೆ, ಇದರ ಇತ್ಯರ್ಥದ ಬಗ್ಗೆ ಸ್ಯ 1890ನೇ ಇಸವಿ ಜುಲೈ ತಿಂಗಳು 8ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ ಮಾಡಿ ಇದೆ. ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರು ಆಕ್ಷೇಪಣೆ ಯಿರತಕ್ಕವರೆಲ್ಲರೂ ಅನರೇ ಆಗಲಿ ಅವರ ತರಫ್ ಅಡ್ವೊಕೇಟರಾಗಲಿ ಹಾಜರಾಗತಕ್ಕದ್ದು.

ತಾರೀಖು 9ನೇ ಮಾಹೆ ಏಪ್ರೆಲ್ 1890.

ಕೋರ್ಟ್‌ನಿಂದ,
ಎಸ್. ಆರ್. ಸುಬ್ಬರಾಯರ್,
ರಿಜಿಸ್ಟ್ರಾರ್.